Mahamahopaadhyaya
VIDWAN G. MAHABALESHWARA BHAT
Aasthaana Vidwan
Sri Sri Jagadguru Shankaracharya Mahasamsthanam
Dakshinaamnaaya Sri Sharada Peetham
Sringeri 577139

Rtd. Professor
Dept. of Vyakarana
Sri Chamarajendra Samskrit College
Chamarajpet, Bangalore – 18

---

ನನ್ನ ವಿದ್ಯಾಗುರುಗಳು ಪೂಜ್ಯರಾದ ಮಹಾಮಹೋಪಾಧ್ಯಾಯ ವಿದ್ವಾನ್ ಶ್ರೀ ಎನ್.ರಂಗನಾಥಶರ್ಮರು. ಅವರ ವ್ಯಕ್ತಿತ್ವ ಮತ್ತು ವೈದುಷ್ಯವನ್ನು ಪ್ರತ್ಯಕ್ಷವಾಗಿ ನೋಡಿದ ನನಗೆ ಅವರ ಮತ್ತು ಆವರ ಸಮಗ್ರ ಕೃತಿಗಳ ಬಗ್ಗೆ ಈಗಷ್ಟೇ ಲೋಕಾರ್ಪಣೆಯಾಗಿರುವ ವೆಬ್ಸೈಟನ್ನು ನೋಡಿ ತುಂಬ ಸಂತೋಷವಾಗಿದೆ. ಶ್ರೀಶರ್ಮರ ಸಂಕ್ಷಿಪ್ತ ಪರಿಚಯ, ಅನೇಕ ಭಾವಚಿತ್ರಗಳೂ ಇರುವ ಈ ವೆಬ್ಸೈಟ್ ನಲ್ಲಿ ಅವರ ಎಲ್ಲ ಕೃತಿಗಳೂ ಅಲ್ಲಲ್ಲಿ ಸೇರಿ ಹೋಗಿರುವ ಅನೇಕ ಅಪೂರ್ವ ಲೇಖನಗಳು ಒಂದೇ ಕಡೆಯಲ್ಲಿ ಅಡಕವಾಗಿರುವುದರಿಂದ ಸಹೃದಯ ಓದುಗರಿಗೆ ತುಂಬ ಉಪಕಾರವಾಗಿದೆ. ಪುನರ್ಮುದ್ರಣವಿಲ್ಲದೆ ಲಭ್ಯವಾಗದ ಅನೇಕ ಅತ್ಯುಪಯುಕ್ತವಾದ ಕೃತಿಗಳು ಇಲ್ಲಿ ಲಭ್ಯವಾಗಿರುವುದು ಜಿಜ್ಞಾಸುಗಳಾದ ಓದುಗರಿಗಂತೂ ತುಂಬ ಅನುಕೂಲವಾಗಿದೆ.

ಶ್ರೀಶರ್ಮರು ಬದುಕಿರುವಾಗ ನಾನಾ ಪ್ರಶ್ನೆಗಳಿಗೆ - ಅದು ಶಾಸ್ತ್ರೀಯ ವಿಷಯವಾಗಿರಬಹುದು, ಲೌಕಿಕವಾಗಿರಬಹುದು - ನಿಖರವಾದ ಉತ್ತರಗಳನ್ನು ಸವಿದಿರುವ ನನಗೆ ಮತ್ತೆ ಈ ವೆಬ್ಸೈಟ್ ಅವರನ್ನು ಜೀವಂತವಾಗಿಸಿದೆ. ಆದ ಕಾರಣ ಇದಕ್ಕಾಗಿ ಪರಿಶ್ರಮ ಪಟ್ಟ ಎಲ್ಲರಿಗೂ ಕೃತಜ್ಞತೆಯನ್ನು ತಿಳಿಸುವುದು ನನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದೇನೆ.

ನನ್ನ ಶಿಷ್ಯರಾಗಿರುವ ಡಾ || ರಾಮಕೃಷ್ಣಭಟ್ಟರು ತುಂಬ ಪರಿಶ್ರಮ ಪಟ್ಟು ಈ ವೆಬ್ಸೈಟನ್ನು ಹೊರತಂದಿದ್ದಾರೆ. ಅವರ ಪರಿಶ್ರಮವನ್ನು ಪ್ರತ್ಯಕ್ಷವಾಗಿ ನೋಡಿರುವ ನಾನು ಅವರಿಗೆ ಆಶೀಃಪೂರ್ವಕ ಅಭಿನಂದನೆಗಳನ್ನು ಹೇಳುತ್ತಾ ಇಂತಹ ಕಾರ್ಯದಲ್ಲಿ ಮತ್ತೆ ಮತ್ತೆ ತಮ್ಮನ್ನು ತೊಡಗಿಸಿಕೊಳ್ಳಲು ಸಹೃದಯ ಓದುಗರು ಅಭಿನಂದಿಸಿ ಪ್ರೋತ್ಸಾಹಿಸುತ್ತೀರೆಂದು ಭಾವಿಸುತ್ತೇನೆ.



ವಿದ್ವಾನ್ ಜಿ. ಮಹಾಬಲೇಶ್ವರಭಟ್ಟ

೧೪ – ೦೫ - ೨೦೧೯